# ಪರ್ಯಾಲೋಚನೆಗಾಗಿ ದಾಖಲೀಕರಣ | ಶಿಕ್ಷಕರೊಬ್ಬರ ದಿನಚರಿ

ಗಜೇಂದ್ರ ದೇವಾಂಗನ್

**26 ಜುಲೈ 2019**

ಇಂದಿನ ಕೆಲಸವು ಕೆಲವು ದೈಹಿಕ ಚಟುವಟಿಕೆಗಳ ಮೂಲಕ ಆರಂಭವಾಯಿತು. ಸುಮಾರು ಹತ್ತು ನಿಮಿಷಗಳ ಚಟುವಟಿಕೆಯ ಬಳಿಕ ನಾವು ದಣಿದಿದ್ದ ಕಾರಣ ಎಲ್ಲರೂ ವೃತ್ತಾಕಾರದಲ್ಲಿ ಕುಳಿತೆವು. ಅಲ್ಲಿ ಇಪ್ಪತ್ತೈದು ಮಕ್ಕಳಿದ್ದು, ಅವರಲ್ಲಿ ಹದಿನಾರು ಮಕ್ಕಳು ಹೊಸದಾಗಿ ಪ್ರವೇಶ ಪಡೆದವರಾಗಿದ್ದರು. ಹಿಂದಿನ ದಿನ ನನಗೆ ಕೆಲವು ಮಕ್ಕಳನ್ನು ಪರಿಚಯಿಸಲಾಗಿತ್ತು. ಆದರೆ ಕೇವಲ ಒಂದೇ ದಿನದಲ್ಲಿ ಅವರೆಲ್ಲರ ಹೆಸರನ್ನು ನೆನಪಿನಲ್ಲಿಟ್ಟುಕೊಳ್ಳುವುದು ಸಾಧ್ಯವಿರಲಿಲ್ಲ. ಇಂದು ಹಲವಾರು ಹೊಸ ಮುಖಗಳೂ ಇದ್ದವು. ಹಾಗಾಗಿ, ಮೊದಲು ಅವರೆಲ್ಲರ ಹೆಸರನ್ನು ತಿಳಿದುಕೊಳ್ಳುವುದು ಹಾಗೂ ಪರಿಚಯ ಮಾಡಿಕೊಳ್ಳುವುದು ಅಗತ್ಯವಾಗಿತ್ತು. ನಾನು ನನ್ನ ಹೆಸರನ್ನು ಹೇಳಿ, ಸ್ವತಃ ಅವರಿಗೆ ಪರಿಚಯಿಸಿಕೊಂಡೆ ಹಾಗೂ ಅವರು ನನ್ನನ್ನು 'ಗಜೇಂದ್ರ ಟೀಚರ್' ಎಂಬುದಾಗಿ ಕರೆಯಬಹುದು ಎಂದು ಹೇಳಿದೆ. ನಂತರ, 'ನಿಮಗೆ ನನ್ನ ಹೆಸರು ಗೊತ್ತು. ಆದರೆ ನನಗೆ ನಿಮ್ಮನ್ನು ಕರೆಯಬೇಕಾಗಿದ್ದಲ್ಲಿ ನಾನು ಹೇಗೆ ಕರೆಯಬೇಕು? ಆದ್ದರಿಂದ ನೀವು ನನಗೆ ನಿಮ್ಮ ಹೆಸರುಗಳನ್ನು ಹೇಳಿದರೆ, ನಾನು ನಿಮ್ಮನ್ನು ಅದೇ ಹೆಸರಿನಿಂದ ಕರೆಯಬಹುದು,' ಎಂದು ಹೇಳಿದೆ. ಇದನ್ನು ನಾನು ಅತ್ಯಂತ ಸಹಜವಾಗಿ ಹೇಳಿದೆ. ಬಹಳಷ್ಟು ಮಕ್ಕಳಿಗೆ ತಮ್ಮ ಹೆಸರನ್ನು ಹೇಳಬೇಕು ಎಂದು ಅನಿಸಿತು. ಮೊದಲನೆಯ ದಿನವೇ ಹೀಗೆಲ್ಲ ಆಗುತ್ತದೆ ಎಂದರೆ ನನಗೆ ನಂಬಲು ಸಾಧ್ಯವಾಗಲಿಲ್ಲ. ನಾನಿನ್ನೂ ನನ್ನ ವಾಕ್ಯವನ್ನು ಪೂರ್ಣಗೊಳಿಸಿರಲಿಲ್ಲ, ಮಕ್ಕಳು ಒಬ್ಬೊಬ್ಬರಾಗಿ ಎದ್ದುನಿಂತು ತಮ್ಮ ಹೆಸರನ್ನು ಹೇಳತೊಡಗಿದರು. ಈ ಎಲ್ಲ ಮಕ್ಕಳು ಶಾಲೆಗೆ ಇಂದೇ ಬಂದವರಾಗಿದ್ದರು. ಇಷ್ಟೊಂದು ಮಕ್ಕಳು ಯಾವುದೇ ಬಲವಂತವಿಲ್ಲದೇ ತಮ್ಮ ತಮ್ಮ ಹೆಸರು ಹೇಳುತ್ತಿರುವುದನ್ನು ನನ್ನ ಶಿಕ್ಷಕ ವೃತ್ತಿಯಲ್ಲಿಯೇ ಮೊದಲ ಬಾರಿಗೆ ನೋಡಿ ನನಗೆ ಆಶ್ಚರ್ಯವಾಯಿತು.

ಮಕ್ಕಳ ಇಂತಹ ನಡವಳಿಕೆಯ ಹಿಂದಿರುವ ಕಾರಣವೇನು? ಹೇಳಲು ಖಂಡಿತವಾಗಿಯೂ ಸಾಧ್ಯವಿಲ್ಲ. ಆದರೆ, ಅದು ನಮ್ಮ ವರ್ತನೆಯನ್ನು ಅವಲಂಬಿಸಿರುವ ಸಾಧ್ಯತೆಯಿದೆ. ಮಕ್ಕಳು ಶಾಲೆಯೆಡೆಗೆ ಆಕರ್ಷಿತರಾಗಬೇಕು, ಶಾಲೆಯಲ್ಲಿ ಮುಂದುವರೆಯಬೇಕು ಹಾಗೂ ನಮ್ಮ ನಿರೀಕ್ಷೆಗಳಿಗೆ ತಕ್ಕಂತೆ ವರ್ತಿಸಬೇಕು ಎಂದು ನಾವು ಬಯಸುವುದಾದಲ್ಲಿ, ನಮ್ಮ ವರ್ತನೆಯೂ ಮಕ್ಕಳ ನಿರೀಕ್ಷೆಯ ಪ್ರಕಾರ ಇರಬೇಕು. ಮಗುವೊಂದು ಶಾಲೆಗೆ ಬಂದಾಗ ಅಲ್ಲಿ ಅದಕ್ಕೆ ಕಟ್ಟಡ, ಇತರ ವಿದ್ಯಾರ್ಥಿಗಳು, ಶಿಕ್ಷಕರು, ಭಾಷೆ, ಶಾಲಾ ಪ್ರಕ್ರಿಯೆಗಳು ಇತ್ಯಾದಿ ಎಲ್ಲವೂ ಹೊಸದೇ ಆಗಿರುತ್ತವೆ ಎಂಬುದನ್ನು ನಾವು ಅಗತ್ಯವಾಗಿ ಅರ್ಥ ಮಾಡಿಕೊಳ್ಳಬೇಕು. ಮಕ್ಕಳಿಗೆ ಅವರ ಅನುಭವ ಮತ್ತು ಭಾಷೆಯನ್ನು ಹಂಚಿಕೊಳ್ಳಲು ಅವಕಾಶವನ್ನು ಕೊಟ್ಟಾಗ ಅವರ ಬೆಳವಣಿಗೆ ಚೆನ್ನಾಗಿ ಆಗುತ್ತದೆ. ಅವರನ್ನು ತರಗತಿ ಕೊಠಡಿಗಳತ್ತ ಆಕರ್ಷಿಸಲು ನಾವು ಅವರೊಡನೆ ಅವರ ಭಾಷೆಯಲ್ಲಿ ಮಾತನಾಡಬೇಕು, ಅವರ ಬಳಿ ಕುಳಿತುಕೊಳ್ಳಬೇಕು, ಅವರೊಂದಿಗೆ ನಗುನಗುತ್ತಿರಬೇಕು ಹಾಗೂ ಅವರ ಸಮಸ್ಯೆಗಳನ್ನು ಕೇಳಬೇಕು. ಹೊಸ ಜಾಗದಲ್ಲಿ ತಾವು ಸುರಕ್ಷಿತವಾಗಿದ್ದೇವೆ ಎಂಬ ಭಾವನೆಯು ಮಕ್ಕಳಿಗೆ ಬರುವಂತೆ ಮಾಡುವುದು ತುಂಬಾ ಅವಶ್ಯಕ.

ಇಂದು ಕೈಗೊಂಡ ಮತ್ತೊಂದು ಚಟುವಟಿಕೆಯಲ್ಲಿ ಎಲ್ಲ ಮಕ್ಕಳಿಗೂ ಬರೆಯಲು ಪಾಟಿಯನ್ನು (ಸ್ಲೇಟ್) ಕೊಡಲಾಯಿತು. ಒಟ್ಟು 26 ಸ್ಲೇಟ್‌ಗಳನ್ನು ವಿತರಿಸಲಾಯಿತು. ಬರೆಯುವ ಚಟುವಟಿಕೆ ಮುಗಿಸಿದ ಮೇಲೆ ಸ್ಲೇಟ್‌ಗಳನ್ನು ಒಂದು ಜಾಗದಲ್ಲಿ ಇರಿಸುವಂತೆ ಮಕ್ಕಳಿಗೆ ಹೇಳಲಾಯಿತು. ಬರೆಯುವ ಅಭ್ಯಾಸವು ಸ್ವಲ್ಪ ಹೆಚ್ಚು ಸಮಯವನ್ನು ತೆಗೆದುಕೊಂಡಿದ್ದರಿಂದ ಮಕ್ಕಳಿಗೆ ತುಸು ಬೇಸರ ಬಂದಿತು. ಅವರನ್ನು ಚೈತನ್ಯಶಾಲಿಗಳಾಗಿ ಇಡಲು ಚಟುವಟಿಕೆಯನ್ನು ಬದಲಾಯಿಸುವುದು ಅಗತ್ಯವಾಗಿತ್ತು.

'ಸ್ಲೇಟ್‌ಗಳನ್ನು ಹಂಚುವ ಮೊದಲು ನಾನು ಎಣಿಕೆ ಮಾಡಿಲ್ಲ ಮತ್ತು ಎಷ್ಟು ಸ್ಲೇಟ್‌ಗಳಿವೆ ಎಂಬುದನ್ನು ತಿಳಿಯಬೇಕಾಗಿದ್ದು, ನಾವದನ್ನು ಎಣಿಸೋಣ' ಎಂದು ನಾನು ಮಕ್ಕಳಿಗೆ ಹೇಳಿದೆ. ಸ್ಲೇಟ್‌ಗಳು ಮಧ್ಯದಲ್ಲಿರುವಂತೆ ನಾವೆಲ್ಲರೂ ಅವುಗಳ ಸುತ್ತ ವೃತ್ತಾಕಾರದಲ್ಲಿ ಕುಳಿತೆವು. ನಾನು ಒಂದೊಂದೇ ಸ್ಲೇಟನ್ನು ಎತ್ತಿಕೊಂಡ ಹಾಗೆ ಮಕ್ಕಳು ಅದನ್ನು ಎಣಿಸುತ್ತ ಹೋಗುವುದು ಎಂದು ತೀರ್ಮಾನಿಸಿದೆವು. ಎಣಿಕೆ ಆರಂಭವಾಯಿತು. ಮಕ್ಕಳು ಎಣಿಸುತ್ತಿರುವಾಗ ನಡುವೆ ಒಮ್ಮೊಮ್ಮೆ ನಾನು ಸ್ಲೇಟ್‌ಗಳನ್ನು ಎತ್ತಿಕೊಳ್ಳುವುದನ್ನು ನಿಲ್ಲಿಸಿಬಿಡುತ್ತಿದ್ದೆ. ಮಕ್ಕಳು ಎಣಿಸುವುದನ್ನು ಮುಂದುವರೆಸುತ್ತಾರೆ ಎಂದು ನಾನು ಭಾವಿಸಿದ್ದೆ. ಆದರೆ ಅವರು ತುಂಬಾ ಜಾಗರೂಕರಾಗಿದ್ದರು. ಅವರು ಒಂದೋ ಉಳಿದವರು ಎಣಿಸದಂತೆ ತಡೆಯುತ್ತಿದ್ದರು ಅಥವಾ ಸ್ಲೇಟನ್ನು ಪಕ್ಕಕ್ಕಿಡುವಂತೆ ನನ್ನನ್ನು ಕೇಳಿಕೊಳ್ಳುತ್ತಿದ್ದರು. ಕೆಲವು ಮಕ್ಕಳಿಗೆ ಸಂಖ್ಯೆಗಳನ್ನು ಅನುಕ್ರಮವಾಗಿ ಹೇಳಲು ಆಗುತ್ತಿರಲಿಲ್ಲ. ಆದ್ದರಿಂದ ಸಂಖ್ಯೆ ಮತ್ತು ಸಂಖ್ಯೆಗಳ ಹೆಸರಿನಲ್ಲಿ ವ್ಯತ್ಯಾಸವಿತ್ತು. ಹಾಗಿದ್ದರೂ ಮಕ್ಕಳು ತಾವೇ ಅದನ್ನು ಸರಿಪಡಿಸಿಕೊಂಡು ಮತ್ತೆ ಎಣಿಸಲು ಆರಂಭಿಸಿದರು. ನಾವು ಮತ್ತೆಮತ್ತೆ ಎಣಿಸಿದೆವು. ಸಂಖ್ಯೆ 26ನ್ನು ತಲುಪಿದಾಗ, ನಾನು ಯಾವುದೋ ನೆಪ ಹೇಳಿ, ಅವರು ಮತ್ತೆ ಎಣಿಸುವಂತೆ ಮಾಡಿದೆ. ಹೀಗೆ ಅನೇಕ ಬಾರಿ ಆಯಿತು. ಇಂದಿನ ಎಣಿಕೆ ಪ್ರಕ್ರಿಯೆಯು ಹಲವು ಮಕ್ಕಳ ಪಾಲಿಗೆ ದೊಡ್ಡ ಸವಾಲೇ ಆಗಿತ್ತು. ಅವರು ನಿಖರವಾದ ಸಂಖ್ಯೆಯನ್ನು ತಿಳಿಯಲು ಬಯಸುತ್ತಿದ್ದರು. ಈ ಚಟುವಟಿಕೆಯು ತುಂಬಾ ಆಸಕ್ತಿಪೂರ್ಣವಾಗಿತ್ತು. ಎಲ್ಲಾ ಮಕ್ಕಳು ತಮ್ಮ ಗಮನವನ್ನು ಎಣಿಕೆಯ ಮೇಲೆ ಕೇಂದ್ರೀಕರಿಸಿದ್ದರು. ನಾವು ಒಂದೆರಡು ಬಾರಿ ಇಂಗ್ಲಿಷ್‌ನಲ್ಲಿಯೂ ಎಣಿಸಿದೆವು.

ಈ ಚಟುವಟಿಕೆಯ ಪ್ರಮುಖ ಅಂಶವೆಂದರೆ, ಚಟುವಟಿಕೆ–ಯುದ್ದಕ್ಕೂ ಮಕ್ಕಳು ಸಂಪೂರ್ಣ ಅದರಲ್ಲಿಯೇ ನಿರತರಾಗಿದ್ದುದು. ಎರಡನೆಯದಾಗಿ, ಉಪಯೋಗಿಸಿದ ಬೋಧನಾ ಕಲಿಕಾ ಸಾಮಗ್ರಿಗಳು (TLM–Teaching Learning Materials) ಮೋಹಕವಾದ ಅಥವಾ ದುಬಾರಿ ವಸ್ತುಗಳಾಗಿರಲಿಲ್ಲ. ನಾವು ತರಗತಿ ಕೊಠಡಿಗಳಲ್ಲಿ ಉಪಯೋಗಿಸುವ ಬೋಧನಾ ಕಲಿಕಾ ಸಾಮಗ್ರಿಗಳು ಮಕ್ಕಳಿಗೆ ಸ್ಪರ್ಶಿಸಲು, ದೂರದಿಂದ ನೋಡಲು

ಹಾಗೂ ತಾವೇ ಬಳಸಲು ಸಾಧ್ಯವಾದಂತಹ ಸಾಮಗ್ರಿಗಳಾಗಿರ-ಬೇಕು. ಅವು ಸದೃಢವಾಗಿದ್ದು ಹೆಚ್ಚು ಕಾಲ ಬಾಳಿಕೆ ಬರುವಂತಹದಾಗಿರಬೇಕು. ಮಕ್ಕಳು ಬಳಸಲು ಸುರಕ್ಷಿತವಾಗಿರ-ಬೇಕು ಹಾಗೂ ಸುತ್ತಲಿನ ಪರಿಸರದಲ್ಲಿಯೇ ಸುಲಭವಾಗಿ ಸಿಗುವಂತಹದ್ದಾಗಿರಬೇಕು.

ಇಲ್ಲಿ, ಎಣಿಸುವುದು ನಮ್ಮ ಮುಖ್ಯ ಗುರಿಯಾಗಿತ್ತು ಹಾಗೂ ಮಕ್ಕಳು ಘನ ವಸ್ತುಗಳನ್ನು ಎಣಿಸಲು ಕಲಿಯಬೇಕು ಎಂಬುದನ್ನು ನಾವು ಬಯಸಿದ್ದೆವು. ಮಕ್ಕಳ ಜೊತೆ ಕೆಲಸ ಮಾಡುವಾಗ, ವಿಷಯ-ವಸ್ತುಗಳನ್ನು ಅವರೆದುರಿಗೆ ಹೇಗೆ ಪ್ರಸ್ತುತಪಡಿಸುತ್ತೇವೆ ಎಂಬ ತಂತ್ರವೂ ಇನ್ನೊಂದು ಪ್ರಮುಖವಾದ ಸಂಗತಿಯಾಗಿದೆ. ಶಿಕ್ಷಕರು ತಮ್ಮ ಭಾಷೆ, ಧ್ವನಿ, ಅಭಿನಯ ಹಾಗೂ ಕೌಶಲ್ಯಗಳನ್ನು ಬಳಸಿ ಸಾಧಾರಣವಾದುದನ್ನು ಅಸಾಧಾರಣವಾದುದನ್ನಾಗಿ ಮಾಡಬಲ್ಲರು. ಇಂದು ಮಕ್ಕಳ ಜೊತೆಗೆ ಎಣಿಕೆಯ ಚಟುವಟಿಕೆಯಲ್ಲಿ ಭಾಗಿಯಾಗಿ ನಾನೂ ಕೂಡ ಸಂತೋಷಪಟ್ಟೆನು.

**ದಿನಚರಿ 29 ಜೂನ್ 2019**

ಇಂದಿನ ಕೆಲಸವನ್ನು ಯೋಜನೆಯ ಪ್ರಕಾರ ಕೈಗೊಳ್ಳಲಾಗಿತ್ತು. ಮಕ್ಕಳಿಗೆ ತಾವು ಮನೆಯಂತಹುದೇ ಪರಿಸರದಲ್ಲಿ ಇದ್ದೇವೆ, ಶಾಲೆಯಲ್ಲಿ ಸುರಕ್ಷಿತವಾಗಿದ್ದೇವೆ ಎಂಬ ಭಾವನೆ ಮೂಡಲು, ಅವರು ವಿವಿಧ ಚಟುವಟಿಕೆಗಳಲ್ಲಿ ಸಂತೋಷದಿಂದ ಪಾಲ್ಗೊಳ್ಳಲು, ತಾವು ಹೇಳುವುದನ್ನು ಆಲಿಸಲು ಯಾರೋ ಇದ್ದಾರೆ ಎಂಬ ಭಾವನೆ ಅವರಲ್ಲಿ ಮೂಡಲು ಹಾಗೂ ತಾವು ಕಲಿತಿರುವುದು ತುಂಬಾ ಮುಖ್ಯವಾದುದು ಎಂದು ಅವರಿಗೆ ತಿಳಿಯಬೇಕು ಎಂಬ ಉದ್ದೇಶದಿಂದ, ಹಲವಾರು ಚಟುವಟಿಕೆಗಳ ಮೂಲಕ ನಾನು ಪ್ರತಿಯೊಂದು ಮಗುವನ್ನೂ ಚೆನ್ನಾಗಿ ತಿಳಿದುಕೊಳ್ಳಲು ಪ್ರಯತ್ನಿಸಿದೆ.

**ಇಂದು ಮಾಡಿದ ಕೆಲಸದ ವಿವರ ಹೀಗಿದೆ.**

ನಾನು ಒಂದನೆಯ ತರಗತಿಗೆ ಹೋದೆ. ಕೆಲವು ಮಕ್ಕಳು ತರಗತಿ ಕೊಠಡಿಯಲ್ಲಿ ಆಡುತ್ತಿದ್ದರು. ನಾನು ಅವರ ಕೈಕುಲುಕಿ, 'ಶುಭೋದಯ' ಎಂದು ಹೇಳಿದೆ. ಆಸನಗಳನ್ನು ವ್ಯವಸ್ಥಿತಗೊಳಿಸ-ಬೇಕಾಗಿತ್ತು. ಹಾಗಾಗಿ, ಬೇರೆ ತರಗತಿಯ ಕೆಲವು ಮಕ್ಕಳನ್ನು ಕರೆದೆ, ಅವರ ಸಹಾಯದೊಂದಿಗೆ ನೆಲದ ಮೇಲೆ ಚಾಪೆಗಳನ್ನು ಹಾಸಿದೆ. ಪ್ರಾರ್ಥನೆ-ಸಭೆಗಳು ಮುಗಿದ ಮೇಲೆ ಮಕ್ಕಳಿಗೆ ಬೆಳಗಿನ ತಿಂಡಿಗಾಗಿ ಕಡಲೆಕಾಳುಗಳನ್ನು ಕೊಡಬೇಕಿತ್ತು. ನಾನು ಪ್ರತಿಯೊಂದು ಮಗುವಿನ ಬಳಿಗೂ ಹೋಗಿ, ಮಗು ಕಾಳುಗಳನ್ನು ಚಾಪೆಯ ಮೇಲೆ ಬೀಳಿಸಿಕೊಳ್ಳದೇ ಸರಿಯಾಗಿ ತಿನ್ನುವಂತೆ ನೋಡಿಕೊಂಡೆ.

ನಾವೆಲ್ಲರೂ ವೃತ್ತಾಕಾರದಲ್ಲಿ ನಿಂತೆವು. 'ಕುಳಿತುಕೊಳ್ಳಿ, ಎದ್ದು ನಿಲ್ಲಿ, ಕೈಗಳನ್ನು ಮೇಲಕ್ಕೆತ್ತಿ, ಕೈಗಳನ್ನು ಕೆಳಗಿಳಿಸಿ, ಸುತ್ತಲೂ ತಿರುಗಿ' ಎಂಬಿತ್ಯಾದಿ ನನ್ನ ಆಜ್ಞೆಗಳನ್ನು ಅನುಸರಿಸಿ, ಮಕ್ಕಳು ಕೆಲವು ದೈಹಿಕ ಚಟುವಟಿಕೆಗಳನ್ನು ಅಭ್ಯಾಸ ಮಾಡತೊಡಗಿದರು. ಆಜ್ಞೆಗಳ ಅನುಕ್ರಮಣಿಕೆಯಲ್ಲಿ ತಟ್ಟನೆ ಆಗುವ ಬದಲಾವಣೆಗಳು ಮಕ್ಕಳಿಗೆ ಕೈಕೊಡುತ್ತಿದ್ದವು. ಇದು ತಮಾಷೆಗೆ ಕಾರಣವಾಗುತ್ತಿತ್ತು. ಮಕ್ಕಳು ಇದನ್ನು ತುಂಬಾ ಆನಂದಿಸಿದರು ಹಾಗೂ ಮನಸಾರೆ ನಕ್ಕರು. ಈ ಚಟುವಟಿಕೆ ಮುಗಿದ ಮೇಲೆ ಪ್ರತಿಯೊಬ್ಬರೂ ವೃತ್ತಾಕಾರದಲ್ಲಿ ಕುಳಿತರು. ನಾವು 'ಮಾವಿನಹಣ್ಣಿನ ಬುಟ್ಟಿ, ಮೋಟುರಾಮ್ ಹಲ್ವಾಯಿ ಮತ್ತು ಗಮಲಾ ಪದ್ಯ'ಗಳನ್ನು ಪೂರ್ಣ ಉತ್ಸಾಹದಿಂದ ಅಭಿನಯದೊಂದಿಗೆ ಹಾಡಿದೆವು. ನಂತರ ನಾನು ಅವರಿಗೆ, ಕಪ್ಪುಹಲಗೆಯತ್ತ ಮುಖ ಮಾಡಿ ಕುಳಿತುಕೊಳ್ಳುವಂತೆ ಹೇಳಿ, ಕಪ್ಪುಹಲಗೆಯ ಮೇಲೆ ಕುಂಡ, ನಳ, ಹಗ್ಗ, ಮೀನು ಮತ್ತು ಮನೆ ಎಂಬ ಪದಗಳನ್ನು ಬರೆದೆ. ಬಹಳಷ್ಟು ಮಕ್ಕಳು ಪದಗಳನ್ನು ಓದಬಲ್ಲವರಾಗಿದ್ದರು. ಏಕೆಂದರೆ, ಅವರಲ್ಲಿ ಹಲವರು ಈ ಮೊದಲೇ ಶಾಲೆಗೆ ಹೋದವರಾಗಿದ್ದರು. ಆದರೂ ಕೆಲ ಮಕ್ಕಳಿಗೆ, ಈ ಪದಗಳು ಸಂಪೂರ್ಣ ಹೊಸದಾಗಿದ್ದವು. ಅದಕ್ಕಾಗಿ, ಚಿತ್ರಗಳನ್ನು ಬರೆದು ಈ ಪದಗಳನ್ನು ಉಚ್ಚರಿಸಲು ಅಭ್ಯಾಸ ಮಾಡುವಂತೆ ಹೇಳಿದೆ ಮತ್ತು ಅವುಗಳನ್ನು ಪದಚಿತ್ರಗಳ ಮೂಲಕ ಗುರುತಿಸುವಂತೆ ಹೇಳಿದೆ.

ಅಷ್ಟು ಹೊತ್ತಿಗಾಗಲೇ ನಾವು ಮಾತು, ಹಾಡುಗಳಲ್ಲಿ ಬಹಳಷ್ಟು ಸಮಯವನ್ನು ಕಳೆದಿದ್ದೆವು. ಚಟುವಟಿಕೆಯನ್ನು ಬದಲಾಯಿಸುವ ಅಗತ್ಯವಿತ್ತು. ಮಕ್ಕಳಿಗೆ ಕಪ್ಪುಹಲಗೆಯ ಮೇಲಿದ್ದ ಪದ ಮತ್ತು ಚಿತ್ರಗಳನ್ನು ನೋಡಿ, ಬರೆಯಲು ಹೇಳಿದೆ. ಮಕ್ಕಳ ಬರವಣಿಗೆಯನ್ನು ಗಮನಿಸಿದಾಗ ನನಗೆ ಕೆಲವೇ ಕೆಲವು ಮಕ್ಕಳ ಬರವಣಿಗೆಯು ಸ್ಪಷ್ಟವಾಗಿರುವುದು ಗಮನಕ್ಕೆ ಬಂದಿತು. ಹೆಚ್ಚಿನ ಮಕ್ಕಳಿಗೆ ಬರಹಪೂರ್ವ ಅಭ್ಯಾಸದ ಅವಶ್ಯಕತೆ ಇದೆ ಎಂದು ನನಗನ್ನಿಸಿತು. ಅವರು ಲೇಖನಿಯನ್ನು ಹೇಗೆ ಸಮರ್ಪಕವಾಗಿ ಹಿಡಿದುಕೊಳ್ಳಬೇಕು ಎನ್ನುವುದನ್ನು ತಿಳಿದುಕೊಂಡರೆ ಮತ್ತು ಆಕಾರಗಳ ವಿನ್ಯಾಸವನ್ನು ಅರ್ಥಮಾಡಿಕೊಂಡರೆ, ಬರವಣಿಗೆಯು ಮತ್ತಷ್ಟು ಸುಲಭವಾಗಬಹುದು. ಸದ್ಯಕ್ಕಂತೂ ಮಕ್ಕಳು ತಮ್ಮ ಬರವಣಿಗೆಯಲ್ಲಿ ಆಕಾರಗಳನ್ನು ರಚಿಸುವ ವಿಧಾನವನ್ನೇ ಸುಧಾರಿಸುವ ಅಗತ್ಯ ತುಂಬಾ ಇತ್ತು. ಆದ್ದರಿಂದ, ಕಪ್ಪುಹಲಗೆಯ ಮೇಲೆ ಸರಳವಾದ ಚಿತ್ರಗಳನ್ನು ಬರೆಯುವ ಮೂಲಕ ಹಾಗೂ ಜೊತೆಜೊತೆಗೆ ಮಕ್ಕಳ ನೋಟ್ ಬುಕ್‌ಗಳನ್ನು ಗಮನಿಸುವುದರ ಮೂಲಕ ಬರಹದ ಅಭ್ಯಾಸವು ಆರಂಭವಾಯಿತು. ಸುಮಾರು ಒಂದು ತಾಸಿನ ಬಳಿಕ ಕೆಲವು ಮಕ್ಕಳಿಗೆ ನೀರು ಕುಡಿಯಬೇಕಿತ್ತು, ಇನ್ನು ಕೆಲವರಿಗೆ ಶೌಚಾಲಯಕ್ಕೆ ಹೋಗಬೇಕಿತ್ತು. ಹಾಗಾಗಿ ಅವರಿಗೆ ಐದು ನಿಮಿಷಗಳ ವಿರಾಮವನ್ನು ನೀಡಲಾಯಿತು.

ಆನಂತರ, ನಮ್ಮ ಕೆಲಸವು ಗಣಿತದ ಮೇಲೆ ಕೇಂದ್ರೀಕೃತವಾಯಿತು. ಒಂದರಿಂದ ಮೂವತ್ತರವರೆಗಿನ ಅಂಕಿಗಳನ್ನು ಎಲ್ಲರೂ ಒಟ್ಟಾಗಿ ಎಣಿಸುವುದರೊಂದಿಗೆ ಚಟುವಟಿಕೆಯನ್ನು ಆರಂಭಿಸಿದೆವು ಮತ್ತು ಅದನ್ನು ಹಲವಾರು ಬಾರಿ ಪುನರಾವರ್ತಿಸಿದೆವು. ಮಕ್ಕಳು ಸಂಖ್ಯೆಗಳ ಅನುಕ್ರಮಣಿಕೆಯನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ಹೇಗೆ ಎಣಿಸಬೇಕು ಎಂಬುದನ್ನು ಈಗಾಗಲೇ ತಿಳಿದಿರುವ ಮಕ್ಕಳಿಗೆ ಇದು ಹೆಚ್ಚಿನ ಅಭ್ಯಾಸವನ್ನು ನೀಡಬೇಕು ಎನ್ನುವುದು ನನ್ನ ಉದ್ದೇಶವಾಗಿತ್ತು. ಅದೇ ಹೊತ್ತಿಗೆ ನಾವು ಇನ್ನೊಂದು ಚಟುವಟಿಕೆಯನ್ನೂ ಮಾಡಿದೆವು. ನಾವು ದೊಡ್ಡಗಾತ್ರದ ಮಣಿಗಳನ್ನು ಎಣಿಸುವುದರ ಮೂಲಕ (ಜೋಡೋ ಗ್ಯಾನ್ ಕಿಟ್‌ನಿಂದ) ಎಣಿಕೆಯ ಅಭ್ಯಾಸವನ್ನು ಮಾಡಿದೆವು. ಮಣಿಗಳನ್ನು ನೆಲದ ಮೇಲೆ ರಾಶಿ ಹಾಕಿ ಹರಡಿದೆವು. ಗುಂಪಿನಿಂದ ಯಾರಾದರೂ ಇಬ್ಬರು ಮಕ್ಕಳು ಜೊತೆಯಾಗಿ ಮುಂದೆ ಬರುವಂತೆ ಹೇಳಿದೆ. ಒಂದು ಮಗುವಿಗೆ ತನ್ನೆರಡೂ ಅಂಗೈಗಳನ್ನು ತೆರೆದು ಒಟ್ಟಾಗಿ ಇಟ್ಟುಕೊಳ್ಳುವಂತೆ ಹೇಳಿದೆ. ಮತ್ತೊಂದು ಮಗುವಿಗೆ, ನೆಲದಿಂದ ಒಂದೊಂದೇ ಮಣಿಯನ್ನು ಎತ್ತಿ ಜೊತೆಯಲ್ಲಿರುವ ಮಗುವಿನ ಅಂಗೈನಲ್ಲಿ ಇಡುತ್ತ ಹೋಗುವಂತೆ ಹೇಳಿದೆ. ಅಂಗೈನಲ್ಲಿ ಮಣಿಯನ್ನು ಇಡುತ್ತಲೇ ವೀಕ್ಷಿಸುತ್ತಿರುವ ಉಳಿದ ಮಕ್ಕಳು ಅದನ್ನು ಎಣಿಸುತ್ತಿದ್ದರು. ಕೆಲವೊಮ್ಮೆ ಬೇರೆಯವರೊಡನೆ ಸಮಾಲೋಚಿಸಿದ ನಂತರ ಮಕ್ಕಳು ಸರಿಯಾಗಿ ಎಣಿಸಿ ಹೇಳುತ್ತಿದ್ದರು. ಮಣಿಯನ್ನು ಅಂಗೈನಲ್ಲಿ ಇಟ್ಟ ಮೇಲಷ್ಟೇ ಅವರು ಅದನ್ನು ಎಣಿಸುತ್ತಿದ್ದರು. ಎಲ್ಲಾ ಮಕ್ಕಳೂ ಈ ಚಟುವಟಿಕೆಯಲ್ಲಿ ಪಾಲ್ಗೊಳ್ಳಲು ಆಸಕ್ತರಾಗಿದ್ದರು. ಆದ್ದರಿಂದ, ಅವರಿಗೆ ಇಬ್ಬಿಬ್ಬರು ಜೊತೆಯಾಗಿ ಮುಂದೆ ಬಂದು ಪಾಲ್ಗೊಳ್ಳಲು ಅವಕಾಶ ಮಾಡಿಕೊಡಲಾಯಿತು. ಇಂದು ನಾವು 1ರಿಂದ 10ರವರೆಗೆ ವಸ್ತುಗಳನ್ನು ಎಣಿಸುವ ಅಭ್ಯಾಸ ಮಾಡಿದೆವು.

ಸ್ವಲ್ಪ ವಿರಾಮದ ನಂತರ, ನಾವು ಮತ್ತೆ ಗಣಿತವನ್ನು ಆರಂಭಿಸಿದೆವು. ಈ ಬಾರಿ ನಾವು ಚಿತ್ರಗಳ ಮೂಲಕ ಚಿಕ್ಕದು–ದೊಡ್ಡದು, ಮೇಲೆ–ಕೆಳಗೆ ಮುಂತಾದ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆವು. ಬಹಳಷ್ಟು ಮಕ್ಕಳಿಗೆ ಚಿತ್ರಗಳನ್ನು ನೋಡಿ, ಚಿಕ್ಕದು ಮತ್ತು ದೊಡ್ಡದು, ಮೇಲೆ ಮತ್ತು ಕೆಳಗೆ ಮುಂತಾದವುಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಅಂಕಿಗಳ ಆಧಾರದ ಮೇಲೆ ಕಡಿಮೆ ಮತ್ತು ಹೆಚ್ಚು ಎಂಬುದನ್ನೂ ಅವರು ಹೇಳಬಲ್ಲವರಾಗಿದ್ದರು. ಮಕ್ಕಳಲ್ಲಿ ಅಂದಾಜಿಸುವ ಸಾಮರ್ಥ್ಯವನ್ನು ಬೆಳೆಸಲು ಹಾಗೂ ಕಡಿಮೆ–ಹೆಚ್ಚು ಎಂಬುದರ ಪರಿಕಲ್ಪನೆಯನ್ನು ಇನ್ನಷ್ಟು ಸ್ಪಷ್ಟಗೊಳಿಸಲು ಚಟುವಟಿಕೆಯೊಂದನ್ನು ಕೈಗೊಳ್ಳಲಾಯಿತು. ನಾನು ಮಕ್ಕಳ ಸ್ಲೇಟ್‌ಗಳು, ನೋಟ್ ಬುಕ್‌ಗಳು ತರಗತಿ ಕೊಠಡಿಯ ಮತ್ತು ಗ್ರಂಥಾಲಯದ ಪುಸ್ತಕಗಳು, ಕೆಲವು ಪ್ಲಾಸ್ಟಿಕ್ ಬ್ಲಾಕ್ಸ್‌ಗಳನ್ನು ಹೊರತೆಗೆದೆ. ನಾವೆಲ್ಲರೂ ವೃತ್ತಾಕಾರದಲ್ಲಿ ಕುಳಿತುಕೊಂಡೆವು. ನಾನು ಕೆಲವು ವಸ್ತುಗಳನ್ನು ಕೈಗಳಲ್ಲಿ ಎತ್ತಿಕೊಂಡು, 'ಯಾವ ಕೈಯಲ್ಲಿ ಹೆಚ್ಚು ವಸ್ತುಗಳಿವೆ? ಹೇಳಿ.' ಎಂದು ಮಕ್ಕಳನ್ನು ಕೇಳಿದೆ. ಮಕ್ಕಳೆಲ್ಲ ತಮಗೆ ಸರಿಕಂಡ ಉತ್ತರವನ್ನು ಹೇಳುತ್ತಿದ್ದರು. ಕೆಲವೊಮ್ಮೆ ನಾನು ಒಂದೇ ತರಹದ ವಸ್ತುಗಳನ್ನು ಎತ್ತಿಕೊಳ್ಳುತ್ತಿದ್ದೆ. ಮತ್ತೆ ಕೆಲವೊಮ್ಮೆ ಬೇರೆ ಬೇರೆ ತರಹದ ವಸ್ತುಗಳನ್ನು ಎತ್ತಿಕೊಳ್ಳುತ್ತಿದ್ದೆ. ಈ ಚಟುವಟಿಕೆಯನ್ನು ಹಲವಾರು ಬಾರಿ ಪುನರಾವರ್ತಿಸಿದೆ. ಅದೇ ವೇಳೆಯಲ್ಲಿ, ಯಾವ ವಸ್ತು ಹೆಚ್ಚಿದೆ ಎಂಬುದನ್ನು ತಿಳಿಯುವುದು ಹೇಗೆ ಎನ್ನುವುದನ್ನು ಮಕ್ಕಳಿಗೆ ಹೇಳಿದೆ. ವಸ್ತುಗಳನ್ನು ಹೇಗೆ ಜೋಡಿಯಾಗಿಸಬೇಕು ಮತ್ತು ಕಡಿಮೆ–ಹೆಚ್ಚು ಎನ್ನುವುದನ್ನು ಹೇಗೆ ತಿಳಿಯಬೇಕು ಎನ್ನುವುದನ್ನೂ ಕಲಿಸಿದೆ. ಹಲವಾರು ಮಕ್ಕಳು ವಸ್ತುಗಳನ್ನು ಜೊತೆಗೂಡಿಸುವ ಕೆಲಸದಲ್ಲಿ ನೆರವಾದರು.

ಕಳೆದ ಈ ಮೂರು ದಿನಗಳ ಕಾಲವೂ, ಊಟದ ನಂತರ ಮಕ್ಕಳಿಗೆ ಹದಿನೈದು ನಿಮಿಷಗಳ ಕಾಲ ಮುಕ್ತವಾಗಿ ಆಟವಾಡಲು ಸಮಯವನ್ನು ನೀಡಲಾಗಿತ್ತು. ಆ ಸಮಯದಲ್ಲಿ ಮಕ್ಕಳು ವಿವಿಧ ರೀತಿಯ ಆಟದ ಸಾಮಗ್ರಿಗಳ ಜೊತೆಗೆ (ಬ್ಲಾಕ್ಸ್, ಅಡುಗೆ ಆಟದ ಸೆಟ್ ಇತ್ಯಾದಿ) ಒಬ್ಬೊಬ್ಬರೇ ಮತ್ತು ಸಣ್ಣ ಗುಂಪಿನಲ್ಲಿ ಆಟವಾಡುತ್ತಿದ್ದರು. ಇದೂ ಕೂಡ ಮುಖ್ಯ ಉದ್ದೇಶವೊಂದರ ಭಾಗವೇ ಆಗಿದೆ. ಏಕೆಂದರೆ, ಈ ಅವಧಿಯಲ್ಲಿ ಬೇರೆಬೇರೆ ಹಳ್ಳಿಗಳಿಂದ ಬರುವ ಮಕ್ಕಳು ಪರಸ್ಪರ ಪರಿಚಯಿಸಿಕೊಂಡರು ಹಾಗೂ ಸ್ನೇಹವನ್ನು ಬೆಳೆಸಿಕೊಂಡರು. ಓಡುವುದು ಮತ್ತು ಬ್ಲಾಕ್ಸ್‌ಗಳನ್ನು ಜೋಡಿಸುವುದರಿಂದ ಮಕ್ಕಳ ಶಾರೀರಿಕ ಬೆಳವಣಿಗೆಯೂ ಬಲಗೊಳ್ಳುತ್ತದೆ. ಹೊಸತನ್ನೇನಾದರೂ ಸೃಷ್ಟಿಸುವಂತೆ ಅವರ ಮೆದುಳಿಗೆ ಕೆಲಸ ಸಿಗುತ್ತದೆ. ಅಡುಗೆಯಾಟ, ಡಾಕ್ಟರ್–ಡಾಕ್ಟರ್ ಆಟ ಇತ್ಯಾದಿಗಳನ್ನು ಆಡುವಾಗ ಅವರು ವಿಭಿನ್ನ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಅವರು ಒಂದಕ್ಕಿಂತಲೂ ಹೆಚ್ಚು ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದರು. ಅದು ಈ ವಯಸ್ಸಿನಲ್ಲಿ ಸರ್ವತೋಮುಖ ಬೆಳವಣಿಗೆಗೆ ಅಗತ್ಯವಾಗಿತ್ತು. ನನ್ನ ತರಗತಿಯಲ್ಲಿ ಒಬ್ಬ ಚಿಕ್ಕ ಬಾಲಕನಿದ್ದಾನೆ. ಅವನು ಗುಂಪಿನಲ್ಲಿ ಎಲ್ಲರಿಗಿಂತ ಕಿರಿಯ. ಇಡೀ ದಿನವೂ ತುಂಬಾ ಚುರುಕಾಗಿರುತ್ತಾನೆ. ನಾನು ಗಮನಿಸಿದ ಪ್ರಕಾರ, ಅವನಿಗೆ 20–30 ಸೆಕೆಂಡುಗಳಿಗಿಂತ ಹೆಚ್ಚು ಕಾಲ ಯಾವ ಕೆಲಸದಲ್ಲಿಯೂ ಗಮನವನ್ನು ಕೇಂದ್ರೀಕರಿಸಲು ಆಗುವುದಿಲ್ಲ. ಅವನು ಯಾವಾಗಲೂ ಬೇರೆಬೇರೆ ಕೆಲಸವನ್ನು ಮಾಡಲು ಉತ್ಸುಕನಾಗಿರುತ್ತಾನೆ. ಆತ ಮಾತನಾಡುವುದು ಕಡಿಮೆ; ಹಲವು ಪ್ರಶ್ನೆಗಳನ್ನು ಕೇಳಿದರೂ, ಕೆಲವೇ ಪದಗಳಲ್ಲಿ ಉತ್ತರಿಸುತ್ತಾನೆ. ಅವನು ಓಡುವುದನ್ನು, ಗಲಾಟೆ ಮಾಡುವುದನ್ನು, ಬೇರೆ ಮಕ್ಕಳನ್ನು ನೂಕುವುದನ್ನೆಲ್ಲ ಗಮನಿಸುತ್ತಲೇ ಇದ್ದೆ. ಅವನ ಏಕಾಗ್ರತೆಯನ್ನು ಹೆಚ್ಚಿಸಬೇಕು, ಕೈಗಳ ಹಿಡಿತವನ್ನು ಬಲಗೊಳಿಸಬೇಕು, ಅವನು ಸಮತೋಲನವನ್ನು ಸಾಧಿಸಲು ಶಕ್ತನಾಗಬೇಕು, ಗಂಭೀರವಾಗಿ ಆಲೋಚಿಸಲು ಕಲಿಯಬೇಕು ಎಂದು ನನಗನ್ನಿಸಿತು. ಆದ್ದರಿಂದ ಅವನಿಗಾಗಿ ಒಂದು ಚಟುವಟಿಕೆಯನ್ನು ರೂಪಿಸಿದೆ.

ಅವನನ್ನು ನನ್ನ ಬಳಿಗೆ ಕರೆದು, ಪಕ್ಕದಲ್ಲಿಯೇ ಕೂರಿಸಿಕೊಂಡೆ. ಊಟಕ್ಕಿಂತ ಮೊದಲು ನಾವು ಎಣಿಸಿದ್ದ ಮಣಿಗಳನ್ನೇ ಅವನಿಗೆ ಕೊಟ್ಟೆ. ಸುಮಾರು ಇಪ್ಪತ್ತು ಮಣಿಗಳಿದ್ದವು. ಮಣಿಗಳನ್ನು ಒಂದರ ಮೇಲೊಂದು ಇಡಬೇಕೆಂದು ಹೇಳಿದೆ. ಹೇಗೆ ಮಾಡಬೇಕೆಂಬುದನ್ನೂ ತೋರಿಸಿದೆ. ಅವನು ಉತ್ಸಾಹದಿಂದ ಆ ಕೆಲಸದಲ್ಲಿ ತೊಡಗಿಕೊಂಡ. ಅವನ ಪ್ರಯತ್ನಗಳು ನೋಡುವ ಹಾಗಿದ್ದವು. ಅವನು ಒಂದು ಮಣಿಯನ್ನು ಇನ್ನೊಂದರ ಮೇಲಿಡುತ್ತ ಹೋದಂತೆ, ಕೆಲವೊಮ್ಮೆ ಬಾಗುತ್ತಿದ್ದ, ಕೆಲವೊಮ್ಮೆ ಒರಗುತ್ತಿದ್ದ, ಕೆಲವೊಮ್ಮೆ ಮಂಡಿಯ ಮೇಲೆ ಕುಳಿತಿರುತ್ತಿದ್ದ, ಮಣಿಗಳನ್ನು ಕೈಯಲ್ಲಿ ಇಟ್ಟುಕೊಳ್ಳುತ್ತಿದ್ದ, ಕೆಲವೊಮ್ಮೆ ಕಾಲಿನ ಮೇಲೆಯೂ ಇಟ್ಟುಕೊಳ್ಳುತ್ತಿದ್ದ. ಏನೇ ಹೆಣಗಾಡಿದರೂ ಒಂದರ ಮೇಲೊಂದರಂತೆ ಎರಡು ಮೂರು ಮಣಿಗಳನ್ನು ಇಡಲೂ ಅವನಿಂದಾಗಲಿಲ್ಲ. ಹತ್ತು ನಿಮಿಷ ಒದ್ದಾಡಿದ. ಆಮೇಲೆ, ನಿರಾಶೆಗೊಂಡು ಈ ಚಟುವಟಿಕೆಯನ್ನು ಬಿಡಲು ಸಿದ್ಧನಾದ. ಹಾಗಾಗಿ ನಾನು ಅವನಿಗೆ ಎರಡನೆಯ ಅಭ್ಯಾಸವನ್ನು ನೀಡಿದೆ. ಮಣಿಗಳನ್ನು ದಾರದಲ್ಲಿ ಪೋಣಿಸಲು ಹೇಳಿದೆ. ಅವನು ಅದೇ ಉತ್ಸಾಹದಲ್ಲಿ ಕೆಲಸ ಮಾಡಲು ಆರಂಭಿಸಿದ. ಈ ಬಾರಿ ಕೆಲಸವು ಹಿಂದಿನದಕ್ಕಿಂತಲೂ ಸುಲಭವಾಗಿತ್ತು. ಆದರೆ ಅದರಲ್ಲಿ ಕಷ್ಟವಿರಲಿಲ್ಲವೆಂದಲ್ಲ. ದಾರದ ತುದಿಯಲ್ಲಿ ಎಳೆಗಳು ಬಿಚ್ಚಿಕೊಂಡಿದ್ದ ಕಾರಣ ಮಣಿಗಳಲ್ಲಿ ಸುಲಭವಾಗಿ ಹೋಗುತ್ತಿರಲಿಲ್ಲ. ಅಂತೂ ಕೊನೆಗೆ, ಅವನ ಶ್ರಮ ಫಲ ಕೊಟ್ಟಿತು. ಮಣಿಗಳನ್ನು ಪೋಣಿಸುವಲ್ಲಿ ಅವನು ಯಶಸ್ವಿಯಾಗಿದ್ದ. ಅಲ್ಲಿಯ ತನಕ ಅವನು ಪ್ರಯಾಸ–ಪಡುತ್ತಿದ್ದುದನ್ನು ನೋಡಿ ಬೆವರತೊಡಗಿದ್ದ ನಾನೂ ನಿರಾಳವಾಗಿ ಉಸಿರಾಡಿದೆ.

ಆ ಚಟುವಟಿಕೆಯ ನಂತರ, ಪ್ರತಿಯೊಂದು ಮಗುವಿನಿಂದಲೂ ಒಂದೊಂದು ಹಾಡು ಹೇಳಿಸಿದೆ. ಅವರ ಸಾಮರ್ಥ್ಯ ಹಾಗೂ ಆಸಕ್ತಿಗೆ ಅನುಗುಣವಾಗಿ ಅವರ ನೋಟ್ ಬುಕ್‌ಗಳಲ್ಲಿ ಮನೆಕೆಲಸವನ್ನು ಬರೆದುಕೊಟ್ಟೆ. ಇಡೀ ದಿನದ ಚಟುವಟಿಕೆಗಳು, ಓಡುವುದು, ಜಿಗಿಯುವುದು ಮುಂತಾದವುಗಳ ಕಾರಣ ನನ್ನ ಮೈ ಮತ್ತು ಮನಸ್ಸು ಎರಡೂ ದಣಿದಿದ್ದವು. ತರಗತಿಯ ನಂತರ ನನಗೆ ಸ್ವಲ್ಪ ಶಾಂತಿ ಮತ್ತು ಬಿಡುವು ಬೇಕಾಗಿತ್ತು. ಮರುದಿನದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿದ್ದರಿಂದ ಅದು ಕಷ್ಟ. ತರಗತಿ ಕೊಠಡಿಯಲ್ಲಿನ ಪ್ರಕ್ರಿಯೆಗಳು ಯಶಸ್ವಿಯಾಗಬೇಕಾದರೆ, ಪ್ರಾಯೋಗಿಕವಾದ ಹಾಗೂ ಫಲಪ್ರದವಾದ ಯೋಜನೆಗಳನ್ನು ಹಾಕಿಕೊಳ್ಳುವುದು ತುಂಬಾ ಮುಖ್ಯ. ಮಕ್ಕಳ ಪ್ರೀತಿ ಹಾಗೂ ಏನನ್ನಾದರೂ ಮಾಡಬೇಕೆಂಬ ಇಚ್ಛಾಶಕ್ತಿಯು ನಮಗೆ ಕೆಲಸ ಮಾಡಲು ಚೈತನ್ಯವನ್ನು ನೀಡುತ್ತದೆ. ನಂತರ ನಮ್ಮ ಮನಸ್ಸು ಮತ್ತು ಹೃದಯವನ್ನು ಕೆಲಸದಲ್ಲಿ ತೊಡಗಿಸಲು ಸುಲಭವಾಗುತ್ತದೆ. ಇಂದಿನ ದಿನವನ್ನು ನಾನು ತುಂಬಾ ಆನಂದಿಸಿದೆ.. ನಾನು ನಿಧಾನವಾಗಿ ನನ್ನ ಗುರಿಯತ್ತ ಸಾಗುತ್ತಿದ್ದೇನೆ ಹಾಗೂ ಮಕ್ಕಳ ಕೆಲಸ ಮತ್ತು ಪ್ರೀತಿಯಿಂದಾಗಿ ಖಂಡಿತವಾಗಿಯೂ ಯಶಸ್ವಿಯಾಗುತ್ತೇನೆ ಎಂದು ನನಗೆ ಅನ್ನಿಸುತ್ತಿದೆ.



**ಗಜೇಂದ್ರ ಕುಮಾರ್ ದೇವಾಂಗನ್** ಅವರು ವಿಜ್ಞಾನದಲ್ಲಿ ಪದವಿ ಹಾಗೂ ಹಿಂದಿ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಅವರು D.Ed ಕೂಡ ಪೂರೈಸಿದ್ದು, ಪ್ರಸ್ತುತ ಛತ್ತೀಸ್‌ಗಡ್‌ನ ಧಾಮ್‌ತರಿಯಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಶನ್ ಶಾಲೆಯಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮೊದಲು, ಹನ್ನೆರಡು ವರ್ಷಗಳ ಕಾಲ ಅವರು ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಅವರು ವಿಶೇಷವಾಗಿ ಹಿಂದಿ ಭಾಷೆಯಲ್ಲಿ ಮಕ್ಕಳಿಗಾಗಿ ಚಿತ್ರಗಳು, ಆಟಗಳು, ಕವಿತೆಗಳು, ಕಥೆಗಳು ಹಾಗೂ ಚಟುವಟಿಕೆಗಳನ್ನು ಸಿದ್ಧಪಡಿಸುವುದರಲ್ಲಿ ಆಸಕ್ತಿಯನ್ನು ಹೊಂದಿದ್ದಾರೆ. ಪಠ್ಯಪುಸ್ತಕಗಳಲ್ಲಿ ಇರುವ ಕವಿತೆಗಳಿಗೆ ರಾಗ ಸಂಯೋಜಿಸುವುದು ಮತ್ತು ಡೋಲಕ್ ನುಡಿಸುತ್ತಾ ಮಕ್ಕಳೊಂದಿಗೆ ನೃತ್ಯ ಮಾಡುವುದೆಂದರೆ ಅವರಿಗೆ ತುಂಬಾ ಇಷ್ಟ. ಇವರನ್ನು gajendra.dewangan@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಸಹನಾ ಹೆಗಡೆ** । ಪರಿಶೀಲನೆ: **ಲತಾ ಕೆ ಸಿ**